ನವೆಂಬರ್ 3, 2005

**25 ಪೈಸೆ ನಾಣ್ಯಗಳು ಈವರೆಗಿನಂತೆ ಮುಂದೆಯೂ ವ್ಯವಹಾರಗಳಲ್ಲಿ ಊರ್ಜಿತವಿರುತ್ತವೆ – ಆರ್‌ಬಿಐ ಸ್ಪಷ್ಟನೆ**

ಅಂಗಡಿಗಳು, ವ್ಯಾಪಾರ ಕೇಂದ್ರಗಳು, ಸಾರ್ವಜನಿಕ ಉಪಯೋಗ ಸೇವೆಗಳು ಹಾಗೂ ಸಾರ್ವಜನಿಕ ವಲಯದ ಸಂಸ್ಥೆಗಳು/ಸರ್ಕಾರಿ ಇಲಾಖೆಗಳಲ್ಲಿ 25 ಪೈಸೆಯ ನಾಣ್ಯಗಳನ್ನು ಸ್ವೀಕರಿಸದೇ ಇರುವ ಬಗ್ಗೆ ಸಾರ್ವಜನಿಕರಿಂದ ರಿಸರ್ವ್ ಬ್ಯಾಂಕಿಗೆ ದೂರುಗಳು ಬರುತ್ತಲೇ ಇವೆ. ವಾಣಿಜ್ಯ ಮತ್ತು ವ್ಯಾಪಾರ ವಲಯಗಳಲ್ಲಿ 25 ಪೈಸೆ ನಾಣ್ಯ ಅನೂರ್ಜಿತಗೊಂಡಿದ್ದು, ಅದು ಚಲಾವಣೆಯಲ್ಲಿ ಇಲ್ಲ ಎಂಬುದು ಸಾಮಾನ್ಯವಾಗಿ ಭಾವಿಸುತ್ತಿರುವುದಾಗಿ ತಿಳಿದು ಬಂದಿದೆ. ಇಂಥ ವರದಿಗಳು ನಿರಾಧಾರವೆಂದು, 25 ಹಾಗೂ 50 ಪೈಸೆ ನಾಣ್ಯಗಳು ಸುಲಭವಾಗಿ ಸಿಗುತ್ತಿದ್ದು ಅವು ಚಲಾವಣೆಯಲ್ಲಿರುವ ಹಣವಾಗಿ ಮುಂದುವರಿಯುತ್ತವೆ ಎಂದು ಆರ್‌ಬಿಐ ತಿಳಿಸಬಯಸುತ್ತದೆ. ಆದ್ದರಿಂದ ಸಂಬಂಧಪಟ್ಟವರೆಲ್ಲರೂ ಯಾವ ಹಿಂಜರಿಕೆಯಿಲ್ಲದೇ ಮುಂಚಿನಂತೆಯೇ ವ್ಯವಹಾರಗಳ ಇತ್ಯರ್ಥದಲ್ಲಿ 25 ಪೈಸೆ ಹಾಗೂ 50 ಪೈಸೆ ನಾಣ್ಯಗಳನ್ನು ಬಳಸಬಹುದು.

ಜಿ. ರಘುರಾಜ್
ಉಪ ಪ್ರಧಾನ
ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2005–2006/537